


# ಫೇಕ್‌ನ್ಯೂಸ್ ಕಿಡಿ ಕೇಡುಗಾಲಕೆ ಮುನ್ನುಡಿ

ಸಾರ್ವಜನಿಕ ಜೀವನ ಅನಾರೋಗ್ಯಕ್ಕೆ ಒಳಗಾಗಿರುವುದರ ಹೊಸ ಲಕ್ಷಣ ‘ಸುಳ್ಳುಸುದ್ದಿ’. ಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿ ವಿಶ್ವಾಸಾರ್ಹ ಹಾಗೂ ನಿಖರ ಎನ್ನುವ ಜನಸಾಮಾನ್ಯರ ನಂಬಿಕೆ ಹುಸಿಯಾಗುತ್ತಿರುವ ಸಂದರ್ಭವಿದು. ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿನ ಸುದ್ದಿಗಳಲ್ಲಿ ಕಲಬೆರಕೆಯೇ ಹೆಚ್ಚು. ‘ಸುಳ್ಳುಸುದ್ದಿ’ಗಳು ರಾಜಕಾರಣ, ಸಿದ್ಧಾಂತ, ಧರ್ಮಗಳ ಹೆಸರಿನಲ್ಲಿ ಜನರ ನಡುವೆ ದ್ವೇಷ ಮೂಡಿಸುತ್ತಿವೆ. ಚುನಾವಣೆ ಸಂದರ್ಭವಂತೂ ಸುಳ್ಳುಸುದ್ದಿಗಳಿಗೆ ಸುಗ್ಗಿಕಾಲ. ನಾಗರಿಕರು ಮೈಯೆಲ್ಲ ಕಣ್ಣಾಗಿರಬೇಕಾದ ಸಮಯವಿದು. ‘ಸುಧಾ’ ಪತ್ರಿಕೆಯ ಸಾಮಾಜಿಕ ಕಾಳಜಿಯ ರೂಪದಲ್ಲಿ ‘ಸುಳ್ಳುಸುದ್ದಿ’ಗಳ ಬಗ್ಗೆ ಓದುಗರನ್ನು ಜಾಗೃತಗೊಳಿಸುವ ಈ ಬರಹ ಪ್ರಕಟಗೊಂಡಿದೆ.